ಮೂವರು ತರುಣ ಶಿಕ್ಷಕರು
ಅವರ ಕಾಣ್ಕೆ, ಸಂಕಲ್ಪ, ಉತ್ಸಾಹ ಮತ್ತು ಪರಿಶ್ರಮ

ಗೋವಿಂದ ಪ್ರಜಾಪತ್, ಮನ್‌ಸೌರ್‌ಬಾಯಿ ಚೌಧರಿ
ಕಾಲೂರಾಮ್ ಯಾದವ್

ಸರ್ಕಾರಿ ಪ್ರಾಥಮಿಕ ಶಾಲೆ, ರಾವ್‌ತಾ
ದೇವಾಲಿ ಬ್ಲಾಕ್, ಟೋಂಕ್ ಜಿಲ್ಲೆ, ರಾಜಸ್ಥಾನ

ಟೋಂಕ್ ಜಿಲ್ಲೆಯ ನೈರುತ್ಯ ದಿಕ್ಕಿನಲ್ಲಿ ದೇವಾಲಿ ತಾಲ್ಲೂಕು ಇದೆ. ಸವಾಯ್ ಮಾಧೋಪುರ್ ಮತ್ತು ಟೋಂಕ್ ಜಿಲ್ಲೆಗಳಿಗೆ ನೀರಾವರಿ ಒದಗಿಸಲು ಹಾಗೂ ಅಜ್ಮೀರ್, ಜಯಪುರ್ ಮತ್ತು ಟೋಂಕ್ ಜಿಲ್ಲೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರವು ಈ ಪ್ರದೇಶದಲ್ಲಿ ಬನಸ್ ನದಿಗೆ ಅಡ್ಡವಾಗಿ ಬಿಲಾಸ್‌ಪುರ್ ಅಣೆಕಟ್ಟನ್ನು ಕಟ್ಟಲು ನಿರ್ಧರಿಸಿದಾಗ ಈ ಯೋಜನೆಯಿಂದ ಉಂಟಾಗುವ ತೊಂದರೆಗಳ ವಿರುದ್ಧ ಹಾಗೂ ಜನರನ್ನು ಸ್ಥಳಾಂತರ ಮಾಡುವುದರ ವಿರುದ್ಧ ತಾಲ್ಲೂಕಿನ ಜನರು ಪ್ರತಿಭಟಿಸಿದರು. ಈ ಸಂಘರ್ಷ ತಾರಕಕ್ಕೇರಿದಾಗ ಅಲ್ಲಿಗೆ ಮೇಧಾ ಪಾಟ್ಕರ್ ಸಹ ಬಂದಿದ್ದರು ಎಂದು ಕೇಳಿದ್ದೇನೆ. ನಾವು ರಾವ್‌ತಾ ಎಂಬ ಹಳ್ಳಿಯ ಕಡೆಗೆ ವಾಹನವೊಂದರಲ್ಲಿ ಪ್ರಯಾಣಿಸಿದಾಗ ಅದೆಲ್ಲಾ ಹಳೆಯ ಕತೆ ಎನಿಸಿತು. ಸರ್ಕಾರವು ಸ್ಥಳಾಂತರಗೊಂಡವರಿಗೆಂದು ನಿರ್ಮಿಸಿದ ವಸತಿಯ ಮನೆಗಳು ರಸ್ತೆಯ ಇಕ್ಕೆಲದಲ್ಲೂ ಕಾಣುತ್ತಿದ್ದವು. ರಾವ್‌ತಾ ಹಳ್ಳಿಯು ಅಣೆಕಟ್ಟೆಗೆ ಸನಿಹದಲ್ಲಿದೆ. ನಾವು ಅಲ್ಲಿನ ಜನರನ್ನು ಭೇಟಿಯಾದಾಗ ಅವರು ಅಣೆಕಟ್ಟನ್ನು ನೋಡಿ ಬನ್ನಿ ಎಂದರು. ಅದೀಗ ಪ್ರವಾಸಿಗರ ಆಕರ್ಷಣೆಯ ತಾಣವಾಗಿದೆ.

ನಮ್ಮ ಭೇಟಿಗೆ ರಾವ್‌ತಾದ ಪ್ರಾಥಮಿಕ ಶಾಲೆಯನ್ನು ಶಿಫಾರಸು ಮಾಡಲು ನಮ್ಮ ಸಹೋದ್ಯೋಗಿಗಳು ಹಿಂಜರಿದಿದ್ದರು. ಶಾಲೆಯ ಮೂಲಸೌಕರ್ಯಗಳ ಕೊರತೆಯೂ ಆಕರ್ಷಕವಲ್ಲದ ಆ ಕಟ್ಟಡದ ಸ್ವರೂಪವೂ ನಮ್ಮ ಉತ್ಸಾಹಕ್ಕೆ ತಣ್ಣೀರು ಎರಚಬಹುದು ಎಂದು ಅವರು ಭಾವಿಸಿದ್ದರು. ಆದರೆ ನಾನು ಈ ಕಥನದಲ್ಲಿ ಇನ್ನೊಂದು ಕಡೆ ಹೇಳಿದ್ದೇನೆ: ಬಾಹ್ಯ ಸ್ವರೂಪ ಚೆಲುವಾಗಿಲ್ಲದ ಕಡೆ ಎಷ್ಟೋ ಬಾರಿ ಅತ್ಯುತ್ತಮ ಗುಣಗಳು ಅಡಗಿರಬಹುದು. ಆದರೆ ವಾಸ್ತವವಾಗಿ ಅಲ್ಲಿನ ಮೂಲಸೌಕರ್ಯವೇನೂ ಕೆಟ್ಟದಾಗಿರಲಿಲ್ಲ. ಐದು ತರಗತಿಗಳಲ್ಲಿ ಇದ್ದ ಒಟ್ಟು 72 ವಿದ್ಯಾರ್ಥಿಗಳಿಗೆ ಮೂರು ಕೊಠಡಿಗಳೂ ಮೂವರು ಶಿಕ್ಷಕರೂ ಇದ್ದರು. ಶಾಲೆಯಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಶೌಚಾಲಯವಿತ್ತು, ಆದರೆ ಸದಾ ನೀರು ಬರುವಂಥ ಕೊಳಾಯಿ ವ್ಯವಸ್ಥೆ ಮಾತ್ರ ಇರಲಿಲ್ಲ. ಶಾಲೆಯ ಒಂದು ಕಡೆ ಇದ್ದ ನಲ್ಲಿಯಿಂದ ಬಕೆಟ್‌ನಲ್ಲಿ ನೀರನ್ನು ಎತ್ತಿಕೊಂಡು ಹೋಗಿ ಉಪಯೋಗಿಸಬೇಕಿತ್ತು.

ನಾವು ಶಾಲೆಯನ್ನು ತಲಪಿದಾಗ ಮೂವರು ಶಿಕ್ಷಕರೂ ತಮ್ಮ ಪಾಠಗಳಲ್ಲಿ

ಮುಳುಗಿದ್ದರು. ನಮಗೆ ಅಲ್ಲಿ ಸಾಕಷ್ಟು ಕಾಲ ಕಳೆಯಲು ಸಾಧ್ಯವಾಯಿತು. ಶಿಕ್ಷಕರ ಬೋಧನೆಯನ್ನು ನೋಡಲು, ಮಕ್ಕಳೊಡನೆ ಮಾತನಾಡಲು, ಮಧ್ಯಾಹ್ನದ ಊಟದ ಕಾರ್ಯಕ್ರಮವನ್ನು ಗಮನಿಸಲು, ಶಿಕ್ಷಕರೊಡನೆ ಹರಟೆ ಹೊಡೆಯಲು ಅವಕಾಶ ದೊರೆಯಿತು. ನಾವು ಅಲ್ಲಿದ್ದಷ್ಟು ಕಾಲವೂ ಶಾಲೆ ಉತ್ಸಾಹದಿಂದ ಗುಂಯ್‌ಗುಡುತ್ತಿತ್ತು ಎಂದು ಭಾಸವಾಯಿತು. ಅದಕ್ಕೆ ಈ ಮೂವರು ಯುವ ಶಿಕ್ಷಕರೇ ಕಾರಣರಾಗಿದ್ದರು. ನಾಲ್ಕು ಹಾಗೂ ಐದನೆಯ ತರಗತಿಗಳನ್ನು ಒಂದು ಕೊಠಡಿಯಲ್ಲೂ, ಮೂರನೆಯ ತರಗತಿಯನ್ನು ಇನ್ನೊಂದು ಕೊಠಡಿಯಲ್ಲೂ ನಡೆಸಲಾಗುತ್ತಿತ್ತು. ಕಾಲೂರಾಮ್ ಯಾದವ್ ಅವರು ಇಂಗ್ಲಿಷನ್ನು, ಮನ್‌ಸೌರ್‌ಬಾಯಿ ಚೌಧರಿ ಹಿಂದಿಯನ್ನು ಮತ್ತು ಗೋವಿಂದ ಪ್ರಜಾಪತ್ ಅವರು ಗಣಿತವನ್ನು ಕಲಿಸುತ್ತಿದ್ದರು.

ನಾವು ಮೊದಲು ಹೋದದ್ದು ಗೋವಿಂದ್ ಅವರು ಗಣಿತ ಕಲಿಸುತ್ತಿದ್ದ ಒಂದು ಮತ್ತು ಎರಡನೆಯ ತರಗತಿಗೆ. ಮೇಷ್ಟ್ರು ಮತ್ತು ಹುಡುಗರು ವೃತ್ತಾಕಾರದಲ್ಲಿ ಕುಳಿತಿದ್ದರು, ಮೇಷ್ಟ್ರು ಸಂಖ್ಯೆಗಳ ಬಗ್ಗೆ ಹೇಳುತ್ತಿದ್ದರು. ಈತ ತುಂಬಾ ಬುದ್ಧಿವಂತ ಶಿಕ್ಷಕರಾಗಿದ್ದು, ಬೋಧನೆಯಲ್ಲಿ ಸೃಜನಶೀಲತೆಯನ್ನು ಅಳವಡಿಸಿಕೊಂಡಿದ್ದಾರೆ ಎಂದು ನಮಗೆ ಕೆಲವೇ ನಿಮಿಷಗಳಲ್ಲೇ ಮನವರಿಕೆ ಆಯಿತು. ಸಾಮಾನ್ಯವಾಗಿ ಶಿಕ್ಷಕರು ಈ ಪಾಠವನ್ನು ಹೇಳಲು ಗುಂಡಗಿನ ಪುಟ್ಟ ಕಲ್ಲುಗಳನ್ನೋ ಬಣ್ಣದ ಮಣಿಗಳನ್ನೋ ಉಪಯೋಗಿಸುತ್ತಾರೆ. ಆದರೆ ಗೋವಿಂದ್, ಮಕ್ಕಳಿಗೆ ಘನಾಕೃತಿಯ ಮರದ ತುಂಡುಗಳನ್ನು ಕೊಟ್ಟಿದ್ದರು. ಅದರ ಒಂದೊಂದು ಮುಖವೂ ಒಂದೋ ಎರಡೋ ಅಂಗುಲದ ಚೌಕವಾಗಿತ್ತು. ಮಕ್ಕಳು ಗುರುಗಳ ನಿರ್ದೇಶನವನ್ನು ಅನುಸರಿಸಿ ಇವುಗಳನ್ನು ಉಪಯೋಗಿಸಿಕೊಂಡು ಎಣಿಸುವುದು, ಕೂಡುವುದು, ಕಳೆಯುವುದು ಮುಂತಾದವನ್ನು ಮಾಡುತ್ತಿದ್ದುದನ್ನು ನೋಡಲು ನಮಗೆ ಆನಂದವಾಯಿತು. ಈ ಮರದ ತುಂಡುಗಳನ್ನು ಉಪಯೋಗಿಸಿದ್ದು ಏಕೆ ಎಂದು ಅನಂತರ ನಾವು ಗೋವಿಂದ್‌ರವರನ್ನು ಕೇಳಿದೆವು. "ದುಂಡಗಿನ ಕಲ್ಲುಗಳನ್ನು, ಎಣಿಸುವುದಕ್ಕೆ ಮಾತ್ರ ಉಪಯೋಗಿಸಬಹುದು, ಅವುಗಳಿಂದ ಸಣ್ಣಪುಟ್ಟ ಗಾಯಗಳೂ ಆಗಬಹುದು ಎನ್ನಿಸಿತು. ನಮ್ಮ ಹಳ್ಳಿಯಲ್ಲಿ ಮರಗೆಲಸ ಮಾಡುವವರ ಬಳಿ ಅವರಿಗೆ ಉಪಯೋಗವಿಲ್ಲದೆ ಬಿದ್ದಿದ್ದ ಅನೇಕ ತೇಗದ ತುಂಡುಗಳನ್ನು ನೋಡಿದೆ. ಆತನಿಗೆ ಅವುಗಳಲ್ಲಿ ಘನಾಕೃತಿಗಳನ್ನು ಕತ್ತರಿಸಿ ಕೊಡಲು ಕೇಳಿಕೊಂಡೆ. ಸಂಖ್ಯೆಗಳನ್ನು, ಗುಣಾಕಾರ ಮೊದಲಾದವನ್ನು ಕಲಿಸಲು, ಆಕಾರ ವಿನ್ಯಾಸಗಳನ್ನು ಪರಿಚಯಿಸಲು ಮತ್ತು ಕುಸಿಯದ ನಿರ್ಮಾಣಗಳನ್ನು ರಚಿಸಲು ಇವುಗಳನ್ನು ಉಪಯೋಗಿಸುತ್ತೇನೆ." ನಾವು ಹೀಗೆ ಮಾತನಾಡುತ್ತಿದ್ದಾಗಲೇ ಇಬ್ಬರು ಮಕ್ಕಳು ಈ ಘನಾಕೃತಿಗಳಿಂದ ಎರಡು ಗೋಪುರದಂಥ ಆಕಾರಗಳನ್ನು ಕಟ್ಟುತ್ತಿದ್ದರು. ಗೋವಿಂದ್ ಮರದ ತುಂಡುಗಳಿಂದ ಗುಣಾಕಾರದ ಮಗ್ಗಿಗಳನ್ನು ರಚಿಸುವುದನ್ನು ತೋರಿಸಿದರು. ಇವರು ವಯಸ್ಸಿನಲ್ಲಿ ತುಂಬಾ ಚಿಕ್ಕವರು. ಇಪ್ಪತ್ತಾರು ವಯಸ್ಸಷ್ಟೇ. ಅವರು 2017ರಲ್ಲಿ ರೀಟ್ (ಆರ್‌ಇಇಟಿ–ರಾಜಸ್ಥಾನ್ ಎಲಿಜಿಬಿಲಿಟಿ ಎಕ್ಸಾಮಿನೇಶನ್ ಫಾರ್ ಟೀಚರ್ಸ್) ಪರೀಕ್ಷೆಯಲ್ಲಿ

ತೇರ್ಗಡೆಯಾಗಿ ಶಿಕ್ಷಣ ಇಲಾಖೆಯನ್ನು ಸೇರಿದರು. ತಮ್ಮ ಶಾಲಾ ಶಿಕ್ಷಣವನ್ನು ಮುಗಿಸಿದ ನಂತರ ಅವರು ಬಿಎಸ್‌ಟಿಸಿ (ಬೇಸಿಕ್ ಸ್ಕೂಲ್ ಟ್ರೇನಿಂಗ್ ಸರ್ಟಿಫಿಕೇಟ್) ಎಂಬ ಶಿಕ್ಷಣ ಡಿಪ್ಲೋಮಾ ಅನ್ನು ಮುಗಿಸಿದ್ದು, ಈಗ ಅಂಚೆ ತೆರಪಿನ ಶಿಕ್ಷಣದ ಮೂಲಕ ಬಿ.ಎ. ಪದವಿಯನ್ನು ಮುಗಿಸಬೇಕೆಂದಿದ್ದಾರೆ. ಅವರ ತಂದೆ ಹಳ್ಳಿಯಲ್ಲಿ ದರ್ಜಿಯಾಗಿದ್ದರೂ ಅನೇಕ ಹತ್ತಿರದ ಸಂಬಂಧಿಗಳು ಶಿಕ್ಷಕರೇ ಆಗಿದ್ದುದರಿಂದ, ತಾನೂ ಶಿಕ್ಷಕನಾಗಬೇಕೆಂಬ ಪ್ರೇರಣೆ ಸಿಕ್ಕಿತು ಎನ್ನುತ್ತಾರೆ.

"ನನಗೆ ರೀಟ್ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ 168ನೆಯ ರ್‍ಯಾಂಕ್ ಬಂತು; ಟೋಂಕ್ ಜಿಲ್ಲೆಯಲ್ಲಿ ಐದನೆಯ ಸ್ಥಾನ ಸಿಕ್ಕಿತು" ಎಂದು ಗೋವಿಂದ್ ಹೆಮ್ಮೆಯಿಂದಲೇ ಹೇಳುತ್ತಾರೆ. ಅವರು ಶಿಕ್ಷಕನಾಗಿ ಬದುಕಿನ ಪ್ರತಿಯೊಂದು ಕ್ಷಣವನ್ನೂ ಆನಂದದಿಂದ ಅನುಭವಿಸುತ್ತಿದ್ದಾರೆ; ಅಲ್ಲದೆ ಈ ಶಾಲೆಯಲ್ಲಿನ ತನ್ನ ಹಿಂದಿನ ಶಿಕ್ಷಕರ ಕೆಲಸವು ಬಹಳ ಉಪಯುಕ್ತವಾಗಿತ್ತು ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ. "ಘನಶ್ಯಾಮ್ ಸರ್ ಅವರು ಮಕ್ಕಳಿಗೆ ಬಲು ಚೆನ್ನಾಗಿ ಕಲಿಸಿದ್ದಾರೆ. ಅವರ ಪರಿಕಲ್ಪನೆಗಳು ತುಂಬಾ ಸ್ಪಷ್ಟವಾಗಿವೆ. ಅವರು ಬಡ್ತಿ ಪಡೆದು ಹೋಗಿದ್ದಾರೆ. ಅವರು ಸಾಧಿಸಿರುವ ಉನ್ನತ ಮಟ್ಟವನ್ನು ಉಳಿಸಿಕೊಳ್ಳಬೇಕಾದದ್ದು ನನ್ನ ಕರ್ತವ್ಯ" ಎನ್ನುತ್ತಾರೆ. ಶಿಕ್ಷಕನಾಗಿರುವುದರಿಂದ ಅವರು ಎದುರಿಸುವ ಸವಾಲುಗಳು ಮತ್ತು ಅವುಗಳನ್ನು ಮೀರಲು ಕೈಗೊಂಡಿರುವ ಪ್ರಯತ್ನಗಳ ಬಗ್ಗೆ ನಾವು ಕೇಳಿದೆವು. ಗೋವಿಂದ್ ಹಿಂದೆ ಮುಂದೆ ನೋಡದೆ, "ನನಗೆ ಭಿನ್ನರಾಶಿಗಳನ್ನು ಕಲಿಸಲು ಕಷ್ಟವಾಗುತ್ತಿತ್ತು; ಇದರಿಂದ ಅದು ಮಕ್ಕಳಿಗೂ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಇದರ ಜವಾಬ್ದಾರಿ ನನ್ನದೇ ಅಲ್ಲವೇ? ನಾನು ಫೌಂಡೇಶನ್‌ನ ಹನುಮಾನ್ ಅವರು ನಡೆಸಿದ ಕಾರ್ಯಾಗಾರಕ್ಕೆ ಹೋಗಿ ಬಂದ ಮೇಲೆ, ಪಝಲ್ ಬ್ಲಾಕ್‌ಗಳು, ಕಾರ್ಡ್‌ಗಳು ಮತ್ತು ಫ್ರಾಕ್ಷನ್ ವಾಲ್ ಇವುಗಳನ್ನು ಉಪಯೋಗಿಸಿಕೊಂಡರೆ ಮಕ್ಕಳಿಗೆ ಪರಿಕಲ್ಪನೆಗಳನ್ನು ಹೇಗೆ ಅರ್ಥಮಾಡಿಸಬಹುದು ಎಂಬುದು ಸ್ಪಷ್ಟವಾಯಿತು. ಅದು ನನ್ನ ಕಲಿಕೆಯಲ್ಲಿ ಒಂದು ಮುಖ್ಯ ಬದಲಾವಣೆಯ ಘಟ್ಟ" ಎಂದು ಹೇಳಿದರು.

ಜಾಣರೂ ಅನ್ವೇಷಕರೂ ಆದ ಗೋವಿಂದ್ ತಮ್ಮ ಸ್ಮಾರ್ಟ್‌ಫೋನಿನಲ್ಲಿ ಅನೇಕ ವಿಷಯಗಳನ್ನು ಅಂತರ್ಜಾಲದಿಂದ ಇಳಿಸಿಕೊಳ್ಳುತ್ತಾರೆ. ಅವರು ನಮಗೆ ಹೇಳುತ್ತಿದ್ದ ಪ್ರತಿಯೊಂದು ವಿಷಯದ ಕುರಿತಾಗಿಯೂ ತಾವು ಉಪಯೋಗಿಸುವ ಸಾಮಗ್ರಿಯನ್ನು ಹಾಗೂ ಅದನ್ನು ಅಳವಡಿಸಿಕೊಂಡ ರೀತಿಯನ್ನು ವಿವರಿಸುತ್ತಿದ್ದರು. ಉದಾಹರಣೆಗೆ ಎರಡು ಅಂಕಿಗಳಿರುವ ಸಂಖ್ಯೆಯನ್ನು ಕೂಡುವುದನ್ನು, ಹಾಗೂ ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ದಾಟಿಸುವುದನ್ನು ತಾವು ಯುಟ್ಯೂಬ್‌ನಿಂದ ಇಳಿಸಿಕೊಂಡಿದ್ದ ಕಾರ್ಯಕ್ರಮದ ಮೂಲಕ ತೋರಿಸಿದರು. ತಮ್ಮ ಇಂಗ್ಲಿಷ್ ಜ್ಞಾನವನ್ನು ಅಭಿವೃದ್ಧಿ ಪಡಿಸಿಕೊಳ್ಳುತ್ತಿರುವುದಾಗಿ ಅವರು ನಗುತ್ತಾ ಹೇಳುತ್ತಾರೆ. "ಇತ್ತೀಚೆಗೆ ಟಿ.ವಿ. ವಾರ್ತೆಗಳಲ್ಲಿ ಅನೇಕ ಹೊಸ ಪದಗಳನ್ನು ಉಪಯೋಗಿಸುತ್ತಾರೆ. ಇಂಪೀಚ್‌ಮೆಂಟ್, ಆಕ್ಸಿಲೆರಿ, ಅಮೆಂಡ್‌ಮೆಂಟ್... ಹೀಗೆ ಅನೇಕ ಹೊಸ ಪದಗಳನ್ನು ಚೆನ್ನಾಗಿ ಕಲಿತು ಅರ್ಥ ಮಾಡಿಕೊಳ್ಳಬೇಕು ಎನಿಸುತ್ತದೆ. ನಾನು ನನ್ನದೇ ಶಬ್ದಕೋಶವನ್ನು

ರಚಿಸಿಕೊಳ್ಳುತ್ತಿದ್ದೇನೆ." ಗೋವಿಂದ್ ಸಪೂರವಾಗಿ ಆರೋಗ್ಯವಂತರಾಗಿ ಕಾಣುತ್ತಾರೆ. ಅವರ ನಡೆ ಚುರುಕಾದದ್ದು. ಅವರು ಎಷ್ಟು ವೇಗವಾಗಿ ಎದ್ದು ನಿಲ್ಲಬಲ್ಲರು, ಕಾಲು ಮಡಿಸಿ ಕೂರಬಲ್ಲರು, ಒಂದು ಕಾಲಿನ ಮೇಲೆ ನಿಲ್ಲಬಲ್ಲರು ಎಂಬುದನ್ನು ಪ್ರದರ್ಶಿಸಿದರು. ಸರಳವಾದ ಸಂಗತಿಗಳಲ್ಲಿ ಕಂಡುಕೊಳ್ಳುವ ಶಿಶುಸಹಜವಾದ ಆನಂದವೇ ಗೋವಿಂದ್‌ರವರ ಕೊನೆಯಿಲ್ಲದ ಚೈತನ್ಯ ಹಾಗೂ ಇನ್ನೂ ಕಲಿಯಲಿಕ್ಕಿದೆ ಎಂಬ ಮನೋಭಾವದ ಹಿಂದಿರುವ ಗುಟ್ಟು.

ಜೇಡಿಮಣ್ಣಿನಲ್ಲಿ ಏನೇನೆಲ್ಲ ಮಾಡಬಹುದು ಎಂಬುದನ್ನು ಪಕ್ಕದ ಕೊಠಡಿಯಲ್ಲಿ ಮನ್‌ಸೌರ್‌ಬಾಯಿ ಅವರು ಮಕ್ಕಳಿಗೆ ಕಲಿಸುತ್ತಿದ್ದರು. ಹಿಂದಿನ ತರಗತಿಯಲ್ಲಿ ಮಾಡಿದ್ದ ಪಾಠವನ್ನು ಅವರು ಮುಂದುವರಿಸುತ್ತಿದ್ದರು. ಮಕ್ಕಳು ಜೇಡಿಮಣ್ಣಿನಿಂದಲೂ ಮಣ್ಣು ಸೇರಿಸಿದ ಇತರ ಮಿಶ್ರಣಗಳಿಂದಲೂ ರಚಿಸಿದ ವಸ್ತುಗಳನ್ನು ಮೇಜಿನ ಮೇಲೆ ಜೋಡಿಸಲು ಅವರಿಗೆ ಸಹಾಯ ಮಾಡುತ್ತಿದ್ದರು. ಇವುಗಳನ್ನು ಜೋಡಿಸುತ್ತಿರುವಾಗಲೇ ಮನ್‌ಸೌರ್‌ಬಾಯಿಯವರು ಮಕ್ಕಳೊಂದಿಗೆ ಕೆಲವೊಂದು ಉಪಯುಕ್ತ, ಅಮೂಲ್ಯ ಮಾಹಿತಿಗಳನ್ನು ಚರ್ಚಿಸುತ್ತಿದ್ದರು. ಉದಾ: ನೀರು ಸ್ಟೀಲ್ ಪಾತ್ರೆಗಿಂತ ಮಡಿಕೆಯಲ್ಲಿ ಹೆಚ್ಚು ತಣ್ಣಗಿರುವುದು ಯಾಕೆ? ಜೇಡಿಮಣ್ಣಿನ ವಸ್ತುಗಳನ್ನು ಸುಡುವುದು ಯಾಕೆ? ಕುಂಬಾರರು ನೀರು ಸೇರಿಸುವ ಮೊದಲು ಮಣ್ಣನ್ನು ಜರಡಿ ಹಿಡಿಯುವುದು ಯಾಕೆ? ಇತ್ಯಾದಿ. ಅಲ್ಲಿ ಮಕ್ಕಳು ತಾವೇ ಜೇಡಿಮಣ್ಣಿನಲ್ಲಿ ಕೆಲಸ ಮಾಡಲು ಕೊಠಡಿಯಿಂದ ಹೊರಟು ಅಂಗಳಕ್ಕೆ ಇಳಿದದ್ದೇ ನಮ್ಮ ಪಾಲಿಗೆ ಸುಂದರ ಕ್ಷಣವಾಯಿತು. ಮನ್‌ಸೌರ್‌ಬಾಯಿಯೂ ಮಕ್ಕಳೂ ಸೇರಿ ದೊಡ್ಡ ಬೇಸಿನ್‌ನಲ್ಲಿದ್ದ ಮಣ್ಣನ್ನು ಜರಡಿ ಆಡಿಸಿ, ನೀರು ಸೇರಿಸಿ ಮಕ್ಕಳ ಪುಟ್ಟ ಗುಂಪುಗಳಿಗೆ ಹಂಚಿದರು. ಈ ಚಟುವಟಿಕೆಯನ್ನು ಮಕ್ಕಳು ಹಿಂದೆಯೂ ಮಾಡಿದ್ದರಿಂದ; ಅವರು ಹಿಂದಿನ ತರಗತಿಯಲ್ಲಿ ತಾವು ಮಾಡಿಟ್ಟಿದ್ದ ವಸ್ತುಗಳನ್ನು ತಂದರು. ಒಂದು ದೀಪ, ಪಾತ್ರೆ, ಒಂದು ಮುಚ್ಚಳ ಇರುವ ಕುಡಿಕೆ ಹಾಗೂ ಪೀಠದಲ್ಲಿ ಕೂರಿಸಿದ್ದ ಒಂದು ಪುಟ್ಟ ಶಿವಲಿಂಗ ತಂದು ಜೋಡಿಸಿದರು. ಆ ಶಿವಲಿಂಗದ ರಚನೆ ತುಂಬಾ ನಾಜೂಕಿನದ್ದೂ ಕಲಾಪೂರ್ಣವೂ ಆಗಿತ್ತು, ಪೀಠದಲ್ಲಿ ಲಿಂಗದ ಪಕ್ಕ ಪಾರ್ವತಿಯ ಚಿಕ್ಕ ವಿಗ್ರಹವನ್ನೂ ಕೂರಿಸಿದ್ದರು. ಈ ರಚನೆಗಳನ್ನು ಮಕ್ಕಳು ಒಲೆಯಲ್ಲಿಟ್ಟು ಬೇಯಿಸಿದ್ದರು ಕೂಡಾ. ಹೀಗೆ ಒಂದು ಮಾಮೂಲಿ ತರಗತಿಯು ಆಹ್ಲಾದಕರವಾದ ಸಾಹಸವಾಗಿ ಪರಿವರ್ತಿತವಾಗಿತ್ತು. ಇಂತಹ 'ಪ್ರಾಜೆಕ್ಟ್' ಕೆಲಸಗಳನ್ನು ಮಾಡಿಸುವುದರಿಂದ ಪಠ್ಯಕ್ರಮವನ್ನು ನಿಗದಿತ ಅವಧಿಯಲ್ಲಿ ಮುಗಿಸಲು ಕಷ್ಟವಾಗುವುದಿಲ್ಲವೇ ಎಂದು ನಾವು ಮನ್‌ಸೌರ್‌ಬಾಯಿಯವರನ್ನು ಕೇಳಿದೆವು. "ಖಂಡಿತಾ ಇಲ್ಲ" ಎಂದರು ಮನ್‌ಸೌರ್‌ಬಾಯಿ. "ನಾವು ಇಂಥ ಕೆಲಸಗಳಿಗೆ ವಸ್ತು, ವಿಷಯಗಳನ್ನು ಸುಯೋಜಿತವಾಗಿ ಆಯ್ಕೆ ಮಾಡಿದರೆ, ಮಕ್ಕಳು ಬದುಕಿನುದ್ದಕ್ಕೂ ತಮ್ಮೊಂದಿಗೆ ಉಳಿಯುವಂಥ ಪರಿಕಲ್ಪನೆಗಳನ್ನು ಕಟ್ಟಿಕೊಳ್ಳುತ್ತಾರೆ; ಜೊತೆಗೆ ತಾವಾಗಿಯೇ ಹೊಸ ಹೊಸತನ್ನು ನಿರ್ಮಿಸುವ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಪಠ್ಯಕ್ರಮವನ್ನು ಮುಗಿಸುವುದಕ್ಕೆ ಯಾವ ಸಮಸ್ಯೆಯೂ ಆಗುವುದಿಲ್ಲ" ಎಂದು ಆಕೆ ಆತ್ಮವಿಶ್ವಾಸದಿಂದಲೇ

ಉತ್ತರಿಸಿದರು. ಮೂವತ್ತು ವಯಸ್ಸಿನ ಇವರು ಆ ಮೂವರು ಶಿಕ್ಷಕರಲ್ಲಿ ಹಿರಿಯರು. ಇವರು ರಾವ್‌ತಾದಿಂದ ಐದು ಕಿ.ಮೀ. ದೂರದಲ್ಲಿ ವಾಸಿಸುತ್ತಾರೆ. ಮನೆಯಲ್ಲಿ ಮೂರು ವರ್ಷದ ಮಗುವಿದೆ. ಇವರು ಶಾಲೆಯಲ್ಲಿದ್ದಾಗ, ಮಗುವನ್ನು ಗಂಡ ನೋಡಿಕೊಳ್ಳುತ್ತಾರೆ. ಸ್ಕೂಟಿಯ ಮೇಲೆ ಓಡಾಡುವ ಈಕೆಯಲ್ಲಿರುವ ಆತ್ಮವಿಶ್ವಾಸವು ಮೆಚ್ಚುವಂತಹದ್ದು. ಇವರು 2015ರಲ್ಲಿ ದೇವಾಲಿ ತಾಲೂಕಿನಲ್ಲಿ ಶಿಕ್ಷಣ ಇಲಾಖೆಯನ್ನು ಸೇರಿ, 2017ರಲ್ಲಿ ರಾವ್‌ತಾಗೆ ಬರುವ ಮುನ್ನ ಇನ್ನೊಂದು ಶಾಲೆಯಲ್ಲಿ ಗಣಿತವನ್ನು ಕಲಿಸುತ್ತಿದ್ದರು. ಬಿ.ಎ. ಮತ್ತು ಬಿ.ಎಡ್. ಮುಗಿಸಿರುವ ಮನ್‌ಸೌರ್ ಬಾಯಿಯವರು '2'ನೇ ಶ್ರೇಣಿಯ ಶಿಕ್ಷಕಿ, ಎಂದರೆ ಅವರಿಗೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಸಲು ಅರ್ಹತೆ ಇದೆ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅವಕಾಶ ಸಿಕ್ಕರೆ ಆಕೆ ಅಲ್ಲಿಗೆ ಹೋಗಲು ಇಚ್ಛಿಸಬಹುದು ಅನಿಸುತ್ತದೆ. ಆದರೆ ಅವರು ರಾವ್‌ತಾದಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಆನಂದದಿಂದ ಕೆಲಸ ಮಾಡುತ್ತಿದ್ದಾರೆ. ಮನ್‌ಸೌರ್ ಟೀಚರ್ ಒಂದು ವೇಳೆ ಬೇರೊಂದು ಶಾಲೆಗೆ ಹೋದರೆ ರಾವ್‌ತಾದ ಮಕ್ಕಳು ಖಂಡಿತಾ ಬೇಸರ ಪಟ್ಟುಕೊಳ್ಳುತ್ತಾರೆ.

ಇನ್ನೊಂದು ಕಡೆ ಕಾಲೂರಾಮ್ ಯಾದವ್ ಅವರು ವ್ಯಾಕರಣ ಕಲಿಸುತ್ತಿದ್ದರು. ಅವರು ಇಂಗ್ಲಿಷ್ ಭಾಷೆಯಲ್ಲಿ ಇರುವ 'ಎ', 'ಆ್ಯನ್' 'ದ' ಮುಂತಾದ ಉಪಪದಗಳನ್ನು ಪರಿಚಯಿಸುತ್ತಿದ್ದರು. ಶಿಕ್ಷಕರಾಗಿ ಅವರದ್ದು ತುಂಬ ವ್ಯವಸ್ಥಿತ ವ್ಯಕ್ತಿತ್ವ ಎಂದು ನಮಗನ್ನಿಸಿತು. ಸ್ಪಷ್ಟವಾದ ಉದಾಹರಣೆಗಳು, ಮಕ್ಕಳಿಗೆ ನೀಡಬೇಕಾದ ಕೆಲಸ, ಪ್ರತಿಯೊಂದು ಮಗುವನ್ನು ತೊಡಗಿಸಿಕೊಳ್ಳುವ ಕ್ರಮ, ಮುಂದಿನ ಪಾಠಕ್ಕೆ ಹೋಗುವ ಮುನ್ನ ಹಿಂದಿನ ಪಾಠವು ಮಕ್ಕಳಿಗೆ ಅರ್ಥವಾಯಿತೇ ಎಂದು ತಿಳಿದುಕೊಳ್ಳುವ ವಿಧಾನ, ಹೀಗೆ ತಾವು ಮಾಡುವ ಪಾಠಕ್ಕೆ ಅಗತ್ಯವಾದ ಸೂಕ್ಷ್ಮವಾದ ಯೋಜನೆಯನ್ನು ಅವರು ರೂಪಿಸಿಕೊಂಡಿದ್ದಾರೆ ಎಂಬುದು ವೇದ್ಯವಾಗುತ್ತಿತ್ತು., 'ಉಪಪದ'ಗಳನ್ನು ಹೇಗೆ ಉಪಯೋಗಿಸಬಹುದು ಎಂಬುದನ್ನು ಮಕ್ಕಳು ಗ್ರಹಿಸಿದ್ದಾರೆ ಎಂಬ ವಿಶ್ವಾಸ ಪಾಠವನ್ನು ಮುಗಿಸುವ ವೇಳೆಗೆ ಅವರಲ್ಲಿ ಮೂಡಿತ್ತು. "ಅವರ್", "ಆನೆಸ್ಟ್" ಮೊದಲಾದ ಪದಗಳ ಮುಂಚೆ 'ಆ್ಯನ್' ಎಂಬ ಉಪಪದವನ್ನು ಏಕೆ ಉಪಯೋಗಿಸಬೇಕು ಎಂಬುದನ್ನು ಅವರು ವಿವರಿಸಿದ ರೀತಿಯಂತೂ ನಮಗೆ ತುಂಬಾ ಇಷ್ಟವಾಯಿತು. ಕಾಲೂರಾಮ್ ಅವರು ಎಲ್ಲ ಪದಗಳನ್ನೂ, ಸ್ವರಗಳನ್ನೂ ದೇವನಾಗರಿ ಲಿಪಿಯಲ್ಲಿ ಬರೆದು ತೋರಿಸುತ್ತಿದ್ದರು. ಇದರಿಂದಾಗಿ ಕೆಲವೊಂದು ಇಂಗ್ಲಿಷ್ ಪದಗಳಲ್ಲಿ ಮೊದಲಲ್ಲಿ ಬರುವ ವ್ಯಂಜನಾಕ್ಷರಗಳನ್ನು ಉಚ್ಚರಿಸದೇ ಬಿಡಬೇಕು (ಸೈಲೆಂಟ್) ಎಂಬುದು ಮಕ್ಕಳಿಗೆ ಕೂಡಲೇ ಅರ್ಥವಾಗುತ್ತಿತ್ತು. ಹೀಗಾಗಿ ಉಚ್ಚಾರಣೆಯಲ್ಲಿ ವ್ಯಂಜನದ ನಂತರ ಬರುವ ಸ್ವರದಿಂದಲೇ ಪದವು ಆರಂಭವಾಗುತ್ತದೆ ಎಂಬುದು ಅರ್ಥವಾಯಿತು. ಅವರು ಚಾಕ್‌ಪೀಸ್ ಕೆಳಗಿಟ್ಟು ಪಾಠ ನಿಲ್ಲಿಸುವ ವೇಳೆಗೆ ಮಧ್ಯಾಹ್ನದ ಊಟದ ಹೊತ್ತಾಗಿತ್ತು.

ಮಧ್ಯಾಹ್ನದ ಊಟದ ಅನಂತರ ಮಕ್ಕಳು ಆಟದ ಮೈದಾನವಾಗಿರುವ ಹೊರಗಿನ ಅಂಗಳದಲ್ಲಿ ಸ್ವಲ್ಪ ಹೊತ್ತು ಆಟವಾಡಿ ತರಗತಿಗೆ ಹೋದರು. ಅವರು ಸ್ವತಂತ್ರವಾಗಿ ಗುಂಪುಗಳನ್ನು ರಚಿಸಿಕೊಂಡು ಕೆಲಸಗಳಲ್ಲಿ ತೊಡಗಿಕೊಂಡರು. ಹರಟೆ, ಗಜಿಬಿಜಿ ಸದ್ದು

ಮಾಡುತ್ತಾ ಮಕ್ಕಳು ಕೆಲಸವನ್ನು ಶುರು ಮಾಡಿದರು. ಆದರೆ ರಾವ್‌ತಾದ ಶಿಕ್ಷಕರು ಸದ್ದುಮಾಡಬೇಡಿ, ಶಿಸ್ತಿನಿಂದಿರಬೇಕು ಎಂದೇನೂ ಮಕ್ಕಳನ್ನು ದಬಾಯಿಸಲಿಲ್ಲ.

ಕಾಲೂರಾಮ್‌ಗೆ ಈಗ ಇಪ್ಪತ್ತೆಂಟು ವರ್ಷ. 2012ರಲ್ಲಿ ಶಿಕ್ಷಣ ಇಲಾಖೆ ಸೇರಿದ ಅವರು ಮೊದಲು ಕೆಲಸ ಮಾಡಿದ್ದು ಬಾರ್‌ಮೆರ್ ಜಿಲ್ಲೆಯಲ್ಲಿ. ಅಲ್ಲಿ ಅವರು 2015ರವರೆಗೂ ಏಕೋಪಾಧ್ಯಾಯ ಶಾಲೆಯಲ್ಲಿ ಕೆಲಸ ಮಾಡಿದರು. ಆದರೆ ಸ್ವಂತ ಜಿಲ್ಲೆಯಾದ ಟೋಂಕ್‌ಗೆ ವಾಪಸು ಹೋಗಲು ಬಯಸಿದ್ದರು. . ಹೀಗಾಗಿ ಕೆಲಸಕ್ಕೆ ರಾಜೀನಾಮೆ ನೀಡಿ ಮತ್ತೆ ಶಿಕ್ಷಕರ ಆಯ್ಕೆಯ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್‌ಗೆ ಪ್ರಯತ್ನಿಸಿ ಯಶಸ್ಸು ಪಡೆದು ಟೋಂಕ್ ಜಿಲ್ಲೆಗೆ ಬಂದರು. ಅವರು 2015ರಲ್ಲಿ ರಾವ್ತಾ ಗ್ರಾಮದ ಶಾಲೆಗೆ ಬಂದು ಸೇರಿದ್ದು ಹೀಗೆ. ಇಲ್ಲಿ ಕೆಲಸಕ್ಕೆ ಸೇರಿದಾಗ ಕೇವಲ ಶಾಲಾ ಪರೀಕ್ಷೆ ಮುಗಿಸಿ ಜೊತೆಗೆ ಶಿಕ್ಷಣದಲ್ಲಿ ಒಂದು ಡಿಪ್ಲೊಮಾ ಪಡೆದಿದ್ದರಷ್ಟೇ. ಅನಂತರದ ದಿನಗಳಲ್ಲಿ ಅಂಚೆ ತೆರಪಿನ ಶಿಕ್ಷಣದ ಮೂಲಕ ಬಿ.ಎ. ಪದವಿಯನ್ನು ಪಡೆದರು.

ಮೂವರು ಶಿಕ್ಷಕರೂ ತರುಣರು, ಚೈತನ್ಯಶಾಲಿಗಳು ಮತ್ತು ಜಾಣರು. ಟೋಂಕ್ ಜಿಲ್ಲೆಯ ಅತ್ಯುತ್ತಮ ಶಿಕ್ಷಕರ ತಂಡ ಇದೇ ಇರಬೇಕು. ಅವರು ತಮ್ಮ ಶಾಲೆಯನ್ನು ಕುರಿತಾಗಿ ಮುಂದಿನ ಕೆಲವರ್ಷಗಳಲ್ಲಿ ಸಾಧಿಸಬಹುದಾದ ಸ್ಪಷ್ಟವಾದ ಗುರಿಗಳನ್ನು ರೂಪಿಸಿ ಕೊಂಡಿದ್ದಾರೆ. 5ನೆಯ ತರಗತಿಯ ಕೆಲವು ವಿದ್ಯಾರ್ಥಿಗಳಾದರೂ ನವೋದಯ ಶಾಲೆಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂಬುದು ಅದರಲ್ಲಿ ಮೊದಲನೆಯದು. 'ಅದು ಕಷ್ಟ ನಿಜ, ಆದರೆ ನಾಲ್ಕೈದು ಹುಡುಗರಿಗಾದರೂ ಅಂತಹ ಅಂತಃಶಕ್ತಿಯಿದೆ. ಕಳೆದ ವರ್ಷ ರಾಜಸ್ಥಾನ ಮಂಡಳಿಯ 5ನೆಯ ತರಗತಿಯ ಪರೀಕ್ಷೆಯಲ್ಲಿ, ನಮ್ಮ ಹದಿನೇಳು ವಿದ್ಯಾರ್ಥಿಗಳಲ್ಲಿ ಹದಿಮೂರು ಜನ ಎ+ ಶ್ರೇಣಿಯನ್ನು ಗಳಿಸಿದ್ದಾರೆ. ಶೇಕಡಾ 91ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ ಮಾತ್ರ ಕೊಡಲಾಗುವಂಥ ಶ್ರೇಣಿ ಅದು.'

ಸಮುದಾಯವು ಶಾಲೆಯ ಬಗ್ಗೆ, ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಬೇಕು ಎಂದು ಈ ಶಿಕ್ಷಕರು ಬಯಸುತ್ತಾರೆ. ಆದರೆ ಪೋಷಕರಿಗೆ ಸಮಯವೇ ಇರುವುದಿಲ್ಲ. ಈ ಊರಿನಲ್ಲಿ ಸಾಮಾನ್ಯವಾಗಿ ಇಬ್ಬರು ಪೋಷಕರೂ ದಿನಗೂಲಿಗಳಾಗಿದ್ದು ಬೆಳಿಗ್ಗೆ ಬೇಗ ಹೊರಟು ರಾತ್ರಿ ತಡವಾಗಿ ಮನೆ ಸೇರುತ್ತಾರೆ. ಅವರಿಗೆ ತಮ್ಮ ಮಕ್ಕಳು ಏನು ಕಲಿಯುತ್ತಿದ್ದಾರೆ ಎಂದು ಕೂಡಾ ನೋಡಲು ವ್ಯವಧಾನ ಇರುವುದಿಲ್ಲ. ಅವರಲ್ಲಿ ಅನೇಕರು ಕಹಾರ್ (ಹಿಂದುಳಿದವರು–ಓಬಿಸಿ) ಸಮುದಾಯಕ್ಕೆ ಸೇರಿದವರು. ಕೆಲವರು ತರಕಾರಿ ಬೆಳೆಯುವ, ಮಾರುವ ಮಾಲಿ ಸಮುದಾಯಕ್ಕೆ ಸೇರಿದವರು, ಈ ಹಳ್ಳಿಯ ಮತ್ತು ಸುತ್ತಮುತ್ತಲಿನ ಗ್ರಾಮಗಳ ಬಹುತೇಕ ಜನ ಬಿಲಾಸ್‌ಪುರ್ ಅಣೆಕಟ್ಟು ಕಟ್ಟಿದಾಗ ತಮ್ಮ ಜಮೀನನ್ನು ಕಳೆದುಕೊಂಡವರು. ನಾವು ಹೊರಟಾಗ ಕಾಲೂರಾಮ್ ಹೇಳಿದ ಮಾತು ಅವರ ಸ್ಥಿತಿ–ಗತಿಗಳನ್ನು ಪಡಿಮೂಡಿಸಿತು, "ಕಳೆದುಕೊಂಡ ಜಮೀನಿಗೆ ಅವರು ಪರಿಹಾರವನ್ನೇನೋ ಪಡೆದುಕೊಂಡರು; ಆದರೆ ಅವರೀಗ ರೈತರಲ್ಲ, ಕೂಲಿಕಾರರು."